ಮಾದಕ ವಸ್ತುಗಳ ವಿರುದ್ಧ ಅಭಿಯಾನಕ್ಕೆ ಎಸ್ಪಿ ಚಾಲನೆ | ಜಿಲ್ಲಾ ಪೊಲೀಸ್ ಇಲಾಖೆ, ವಿಜಯ ಕರ್ನಾಟಕ ಸಹಯೋಗ

# 'ಡ್ರಗ್ಸ್ ಮುಕ್ತ ಜಿಲ್ಲೆಗೆ ಪಣ ತೊಡಿ'

■ ವಿಕ ಸುದ್ದಿಲೋಕ ದಾವಣಗೆರೆ

"ಮುಂದಿನ ದಿನಗಳಲ್ಲಿ ದಾವಣಗೆರೆಯನ್ನು ಮಾದಕ ವಸ್ತು ಮುಕ್ತ ಜಿಲ್ಲೆಯಾಗಿಸಲು ಯುವ ಜನ ಪಣ ತೊಡಬೇಕು,' ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಉಮಾ ಪ್ರಶಾಂತ್ ವಿದ್ಯಾರ್ಥಿಗಳಿಗೆ ಕರೆ ನೀಡಿದರು.

ನಗರದ ಬಾಪೂಜಿ ಎಂಜಿನಿಯರಿಂಗ್ ಮತ್ತು ತಾಂತ್ರಿಕ ಮಹಾವಿದ್ಯಾಲಯದ ಮೆಕ್ಯಾನಿಕಲ್ ವಿಭಾಗದ ಸಭಾಂಗಣದಲ್ಲಿ ವಿಜಯ ಕರ್ನಾಟಕ ಹಾಗೂ ಜಿಲ್ಲಾ ಪೊಲೀಸ್ ಇಲಾಖೆಯಿಂದ ಗುರುವಾರ ಹಮ್ಮಿಕೊಂಡಿದ್ದ 'ಮಾದಕ ವಸ್ತುಗಳ ವಿರುದ್ಧ ಕರ್ನಾಟಕ' ಅಭಿಯಾನಕ್ಕೆ ಚಾಲನೆ ನೀಡಿ ಮಾತನಾಡಿದರು.

ಮಾದಕ ವಸ್ತುಗಳ ವಿರುದ್ಧ ಕರ್ನಾಟಕ
KARNATAKA AGAINST DRUGS
ವಿಕ ಅಭಿಯಾನ
VK CAMPAIGN



ದಾವಣಗೆರೆ ಬಿಐಇಟಿ ಕಾಲೇಜಿನಲ್ಲಿ ಗುರುವಾರ ನಡೆದ ಮಾದಕ ವಸ್ತುಗಳ ವಿರುದ್ಧ ಕರ್ನಾಟಕ ಜಾಥಾದಲ್ಲಿ ವಿದ್ಯಾರ್ಥಿಗಳೊಂದಿಗೆ ಎಸ್ಪಿ ಉಮಾ ಪ್ರಶಾಂತ್.

ಪೊಲೀಸ್ ಇಲಾಖೆ ಈಗಾಗಲೆ ಡ್ರಗ್ಸ್ ಮುಕ್ತ ಕರ್ನಾಟಕ ಮತ್ತು ಡ್ರಗ್ಸ್ ಮುಕ್ತ ದಾವಣಗೆರೆ ಜಿಲ್ಲೆಯಾಗಿಸಲು ಯುದ್ಧ ಸಾರಿದೆ. ಇಲಾಖೆ ಪ್ರಯತ್ನಕ್ಕೆ ಪೂರಕವಾಗಿ ವಿಜಯ ಕರ್ನಾಟಕ ಕೂಡ ಡ್ರಗ್ಸ್ ವಿರುದ್ಧ ಜಾಗೃತಿ ಅಭಿಯಾನ ನಡೆಸುತ್ತಿರುವುದು ಶ್ಲಾಘನೀಯ.

"ಗಡಿಯಲ್ಲಿ ನಿಂತು ಶತ್ರುಗಳ ವಿರುದ್ಧ ಹೋರಾಡುವುದು ಮಾತ್ರ ದೇಶ ಸೇವೆಯಲ್ಲ, ನಾವು ಡ್ರಗ್ಸ್ ವ್ಯಸನಕ್ಕೆ ತುತ್ತಾಗುವುದಿಲ್ಲ ಹಾಗೂ ತಮ್ಮ ಸ್ನೇಹಿತರು ಅಥವಾ ಯಾರೇ ಮಾದಕ ವಸ್ತು ಸೇವಿಸುವುದು ತಿಳಿದುಬಂದರೆ ಕೂಡಲೆ ಪೊಲೀಸರಿಗೆ ಮಾಹಿತಿ ಕೊಡುತ್ತೇವೆಂದು ವಿದ್ಯಾರ್ಥಿಗಳು ಪ್ರತಿಜ್ಞೆ ಮಾಡಬೇಕು. ಇದು ಕೂಡ ದೇಶ ಸೇವೆ" ಎಂದರು.

**ಮದ್ಯವೂ ಡ್ರಗ್ಸ್:**

"ಅಫೀಮು, ಗಾಂಜಾ, ಹೆರಾಯಿನ್, ಎಲ್ಎಸ್‌ಡಿ ಮೊದಲಾದುವಷ್ಟೇ ಮಾದಕ ವಸ್ತುಗಳಲ್ಲ, ಮದ್ಯ (ಆಲ್ಕೋಹಾಲ್) ಸೇರಿ ಅಮಲು ಬರಿಸುವ ಎಲ್ಲವೂ ಡ್ರಗ್‌ಗಳೇ. ಅಲ್ಲದೆ ಮದ್ಯಪಾನ, ಮಾದಕ ವಸ್ತುಗಳ ವ್ಯಸನಕ್ಕೆ ಮಹಾದ್ವಾರವಿದ್ದಂತೆ. ದುರಭ್ಯಾಸ ಹೊಂದಿರುವವರ ಸಂಗ ಮಾಡಬಾರದು. ಜತೆಗೆ ಅವರನ್ನು ವ್ಯಸನಮುಕ್ತರನ್ನಾಗಿಸಲು ಯತ್ನಿಸಬೇಕು. ಇತ್ತೀಚೆಗೆ ಮದ್ಯಪಾನ ಮಾಡುವ ಕಾಲೇಜು ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಾಗಿದೆ. ಸಣ್ಣ ಬೇಸರ, ಖುಷಿ ಎಲ್ಲದಕ್ಕೂ ಆಲ್ಕೋಹಾಲ್ ಇರಲೇಬೇಕೆಂಬ ಪರಿಸ್ಥಿತಿ ನಿರ್ಮಾಣವಾಗಿದ್ದು, ಕಡಿವಾಣ ಬೀಳಬೇಕು" ಎಂದರು.

### ವಿಡಿಯೋ ಪ್ರದರ್ಶನ

ರ‍್ಯಾಂಕ್ ವಿದ್ಯಾರ್ಥಿಯೊಬ್ಬ ಸ್ನೇಹಿತರ ಸಹವಾಸದಿಂದ ಕುಡಿತ ಆರಂಭಿಸಿ ನಂತರ ಡ್ರಗ್ಸ್ ಸೇವನೆ ಶುರು ಮಾಡುತ್ತೇನೆ. ಡ್ರಗ್ಸ್ ಸೇವಿಸಿ ಅಪಘಾತವಾಗಿ ನಂತರ ವ್ಯಸನಮುಕ್ತ ಕೇಂದ್ರದಲ್ಲಿ ಚಿಕಿತ್ಸೆ ಪಡೆದು ಪೊಲೀಸರು, ಪೋಷಕರು, ಸ್ನೇಹಿತರ ಸಹಕಾರದೊಂದಿಗೆ ಮತ್ತೆ ಸಹಜ ಬದುಕಿಗೆ ಮರಳುತ್ತಾನೆ, ಚೆನ್ನಾಗಿ ಓದಿ ಮತ್ತೆ ಎಂಬಿಬಿಸಿ ರ‍್ಯಾಂಕ್ ಪಡೆಯುತ್ತಾನೆ. ಮನ ಪರಿವರ್ತನೆಯ ಈ ವಿಡಿಯೋವನ್ನು ಪೊಲೀಸ್ ಇಲಾಖೆಯಿಂದ ಪ್ರದರ್ಶಿಸಿ ಅರಿವು ಮೂಡಿಸಲಾಯಿತು.

### ಬಿಐಇಟಿ ಡ್ರಗ್ಸ್ ಮುಕ್ತ ಕ್ಯಾಂಪಸ್

ಬಿಐಇಟಿ ಡ್ರಗ್ಸ್ ಮುಕ್ತ ಕ್ಯಾಂಪಸ್ ಆಗಿದೆ ಎಂದು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಪ್ರಾಚಾರ್ಯ ಡಾ.ಎಚ್.ಬಿ. ಅರವಿಂದ್ ಹೇಳಿದರು. ಆಲ್ಕೋಹಾಲ್ ಸೇವನೆ ಹೆಚ್ಚುತ್ತಿದೆ, ಹೆಣ್ಣುಮಕ್ಕಳು ಕೂಡ ಹಿಂದೆ ಬಿದ್ದಿಲ್ಲ. ಈಗ ಗಣೇಶೋತ್ಸವ ಶುರುವಾಗುತ್ತವೆ, ಮೂರ್ತಿ ವಿಸರ್ಜನೆ ವೇಳೆ ಮದ್ಯ ಸೇವನೆ ಸರಿಯಲ್ಲ ಎಂದರು.

**ಮೊಬೈಲ್ ದೊಡ್ಡ ವ್ಯಸನ:**

"ಪೆಡ್ಲರ್‌ಗಳು, ಆರಂಭದಲ್ಲಿ ನಿಮ್ಮನ್ನು ವ್ಯಸನಕ್ಕೆ ತಳ್ಳಲು ಉಚಿತವಾಗಿ ಡ್ರಗ್ ನೀಡುತ್ತಾರೆ. ಡ್ರಗ್ ನಿಮಗೆ ಅನಿವಾರ್ಯವಾದಾಗ ಅವರು, ಕೇಳಿದಷ್ಟು ಹಣ ನೀಡಿ ಖರೀಸಬೇಕಾಗುತ್ತದೆ. ಡ್ರಗ್ ಸೇವನೆ ದೇಶವನ್ನು ಅಧೋಗತಿಗೆ ತಳ್ಳುವುದಲ್ಲದೆ, ಯುವಜನರ ಭವಿಷ್ಯ ಹಾಳು ಮಾಡುತ್ತದೆ. ಒತ್ತಡ ಇದ್ದರೆ ಅದಕ್ಕೆ ಪರಿಹಾರ ಕಂಡುಕೊಳ್ಳಬೇಕೇ ವಿನಾ ಮಾದಕ ವಸ್ತುಗಳ ಮೊರೆ ಹೋಗಬಾರದು. ಇತ್ತೀಚೆಗೆ ಮೊಬೈಲ್ ಬಳಕೆ ದೊಡ್ಡ ವ್ಯಸನವಾಗುತ್ತಿದೆ. ಯುವಜನ ಶೇ.90ರಷ್ಟು ಸಮಯವನ್ನು ಮೊಬೈಲ್ ಬಳಕೆಯಲ್ಲೇ ವ್ಯರ್ಥ ಮಾಡುತ್ತಿದ್ದಾರೆ. ಒಳಿತು, ಕೆಡುಕು ಅರಿತು ಬಳಕೆ ಮಾಡಬೇಕು" ಎಂದರು.

ಡಿವೈಎಸ್ಪಿ ಪದ್ಮಶ್ರೀ ಗುಂಜಿಕರ್, ಡ್ರಗ್ಸ್ ಬಗ್ಗೆ ಮಾಹಿತಿ ನೀಡಿ ಡ್ರಗ್ಸ್ ಮುಕ್ತ ದಾವಣಗೆರೆಗೆ ಕೈ ಜೋಡಿಸಲು ಮನವಿ ಮಾಡಿದರು. ವಿಕ ಸ್ಥಾನಿಕ ಸಂಪಾದಕ ಸದಾನಂದ ಹೆಗಡೆ ಪ್ರಾಸ್ತಾವಿಕ ಮಾತನಾಡಿದರು. ಟೆಕ್ಸ್‌ಟೈಲ್ ವಿಭಾಗದ ಚಂದ್ರಶೇಖರ್ ಕಾರ್ಯಕ್ರಮ ಸಂಯೋಜಿಸಿ, ನಿರೂಪಿಸಿದರು. ಪ್ರಾಧ್ಯಾಪಕರಾದ ಕೃಷ್ಣಕುಮಾರ್, ಪ್ರೊ.ಪ್ರದೀಪ್ ಇತರರು ಇದ್ದರು.

### ಜಾಥಾದಲ್ಲಿ ಸೇ ನೋ ಟು ಡ್ರಗ್ಸ್

ವಾರದ ಮಧ್ಯದಿನ ಗುರುವಾರ ಬಿಐಇಟಿ ಕ್ಯಾಂಪಸ್‌ನಲ್ಲಿ ವಿದ್ಯಾರ್ಥಿಗಳು ಸೇ ನೋ ಟು ಡ್ರಗ್ಸ್ ಘೋಷಣೆ ಮೊಳಗಿಸಿದರು. ಸಭಾ ಕಾರ್ಯಕ್ರಮಕ್ಕೂ ಮುನ್ನ ನಡೆದ ಜಾಥಾಗೆ ಎಸ್ಪಿ ಉಮಾ ಪ್ರಶಾಂತ್, ಸೇ ನೋ ಡ್ರಗ್ಸ್ ಸ್ಲೋಗನ್‌ನ ಪ್ಲೇ ಕಾರ್ಡ್‌ನ್ನು ವಿದ್ಯಾರ್ಥಿಗೆ ನೀಡುವ ಮೂಲಕ ಚಾಲನೆ ನೀಡಿದರು. ವಿದ್ಯಾರ್ಥಿಗಳು ಘೋಷಣೆ ಕೂಗುತ್ತಾ ಸಭಾ ಕಾರ್ಯಕ್ರಮದ ಸಭಾಂಗಣದವರೆಗೂ ಜಾಥಾ ನಡೆಸಿದರು.

### ಪ್ರತಿಜ್ಞಾವಿಧಿ ಸ್ವೀಕಾರ



ಮಾದಕ ವಸ್ತುಗಳಿಂದ ನಾವು ದೂರ ಇರುತ್ತೇವೆ, ಮಾದಕ ವಸ್ತುಗಳ ಸೇವನೆ, ಮಾರಾಟ ಕಂಡರೆ ಪೊಲೀಸ್ ಇಲಾಖೆಗೆ ಮಾಹಿತಿ ನೀಡುತ್ತೇವೆ, ಡ್ರಗ್ಸ್ ಮುಕ್ತ ಸಮಾಜ ನಿರ್ಮಿಸುತ್ತೇವೆ ಎಂದು ವಿದ್ಯಾರ್ಥಿಗಳು ಪ್ರತಿಜ್ಞಾವಿಧಿ ಸ್ವೀಕರಿಸಿದರು.

ಕಲುಷಿತ ನೀರು: 17 ಜನರು ಅಸ್ವಸ್ಥ | ನಾರದಮುನಿಗೆ ವಿಶೇಷ ಪೂಜೆ ನಾಳೆ | 'ಹಸಿವ

30/08/2024
ವಿಜಯ ಕರ್ನಾಟಕ

Bapuji Educational Association (R)

# Bapuji Institute of Engineering & Technology, Davangere – 577 004

# VIJAYA KARNATAKA DAILY

**In Association with**

**Govt. OF KARNATAKA, DAVANGERE DISTRICT POLICE**

**YOUTH RED CROSS WING – BIET, NATIONAL SERVICE SCHEME – BIET,**

**NATIONAL CADET CORPS – NCC,**

**S. S. Health Care Trust, DAVANGERE DISTRICT POLICE,**

***Organizes Campaign on***

# DRUGS FREE KARNATAKA –AN AWARENESS PROGRAM

***"Karnataka against Drugs"***

***A Vijaya Karnataka Campaign, Davangere***

## *ALL ARE CORDIALLY INVITED*

Date : **28-08-2028, Wednesday** Time: **11am**

Venue: **Lord Basaveshwara Seminar Hall, Training & Placement, 4th Floor, Dept. of Mechanical Engg.BIET**